**OS No.133/2025.**

Case called out.

**-: <u>ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ</u> :-**

ವಾದಿಯು, ಪ್ರತಿವಾದಿಯರ ವಿರುದ್ಧ ಘೋಷನಾತ್ಮಕ ಮತ್ತು ಶಾಶ್ವತ ನಿರ್ಭಂದಕಾಜ್ಞೆ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ ದಾವಾ ವಿಚಾರಣೆ ಮುಗಿಯುವವರೆಗೆ 2ನೇ ಪ್ರತಿವಾದಿ ಹಾಗೂ ಅವರ ಕಡೆಯವರು ದಾವಾ ಸ್ಥಳದ ವಾದಿಯ ಶಾಂತಿಯುತ ಕಬ್ಜಾ ಬೋಗ್ವಟೆಗೆ ಆತಂಕಪಡಿಸದಂತೆ ತಮ್ಮ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ವಾದವನ್ನು ಆಲಿಸಲಾಯಿತು ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, WP No.106454/2024 ಅರ್ಜಿಯಲ್ಲಿ ಮಾನ್ಯ ಗೌರವಾನ್ವಿತ ಉಚ್ಚ ನ್ಯಾಯಾಲಯವು ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ವಾದಿಯ ಹೆಸರಿಗೆ ದಾವಾ ಸ್ಥಳವನ್ನು ಎಂಟ್ರಿ ಮಾಡಬೇಕೆಂಬುದಾಗಿ ಆದೇಶ ಮಾಡಿದ್ದು ಇರುತ್ತದೆ. ವಾದಿಯು ಸದರಿ ದಾವಾ ಸ್ಥಳವು ತನ್ನ ತಂದೆಯ ಹೆಸರಿಗೆ ಮಂಜೂರಾದ ಬಗ್ಗೆ ನಮೂನೆ 7 ಮತ್ತು ಭೂ ನ್ಯಾಯ ಆದೇಶದ ಪ್ರತಿ ಹಾಗೂ ಮ್ಯುಟೇಶನ್ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ಕೂಲಂಕೂಷವಾಗಿ ಪರಿಶೀಲಿಸಿದಾಗ

**OS No.133/2025.**

ವಾದಿಯು ಹೂಡಿದ ಈ ದಾವೆಯು ಮೇಲ್ನೋಟಕ್ಕೆ ಸಮ್ಮತವಾದ ದಾವೆಯಾಗಿದೆ ಎಂದು ಕಂಡುಬರುತ್ತದೆ. ಕಛೇರಿಯಲ್ಲಿ ಪರಿಶೀಲಿಸಲಾಯಿತು, ಯಾವುದೇ ಎಚ್ಚರಿಕೆ ಅರ್ಜಿ (ಕೆವಿಯಟ್) ಇರುವುದಿಲ್ಲ. ಆದ್ದರಿಂದ ಈ ಮುಂದಿನಂತೆ ಆದೇಶಿಸುತ್ತೇನೆ.

**ಆ ದೇ ಶ**

ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸಲಾಗಿದೆ.

2ನೇ ಪ್ರತಿವಾದಿಯು ಹಾಗೂ ಅವರ ಕಡೆಯವರು ವಾದಿಯ ದಾವಾ ಸ್ಥಳದ ಶಾಂತಿಯುತ ಕಬ್ಜಾ ಭೋಗ್ವಟೆಗೆ ಆತಂಕಪಡಿಸದಂತೆ ಈ ದಾವೆ ನಿಖಾಲೆಯಾಗುವವರೆಗೆ ತಾತ್ಕಾಲಿಕವಾಗಿ ನಿರ್ಭಂಧಿಸಲಾಗಿದೆ.

ಪ್ರತಿವಾದಿಯರಿಗೆ ಏಕಪಕ್ಷೀಯ ತಾತ್ಕಾಲಿಕ ನಿರ್ಭಂದಕಾಜ್ಞೆಯ ಪ್ರತಿ ಮತ್ತು ತುರ್ತು ನೋಟಿಸ್ ರವಾನಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

ಪ್ರತಿವಾದಿಯರಿಗೆ ದಾವಾ ಸಮನ್ಸ್ ಹೊರಡಿಸಿರಿ.

ವಾದಿಯು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 3(ಎ) ಮತ್ತು (ಬಿ) ನಿಯಮಗಳನ್ನು ಪರಿಪಾಲಿಸತಕ್ಕದ್ದು.

**ಮುಂದಿನ ವಿಚಾರಣೆ ದಿನಾಂಕ 14.11.2025.**

SD/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ಹೊನ್ನಾವರ.**